ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ ಮುಷ್ಕರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 11/4/21

# ಕೋಡಿಹಳ್ಳಿ ಸೆರೆ, ಬೆಳಗಾವಿಯಿಂದ ಗಡಿಪಾರು

## ಅನುಮತಿ ಇಲ್ಲದೆ ಬಹಿರಂಗ ಸಭೆ ನಡೆಸಲು ಮುಂದಾಗಿದ್ದಕ್ಕೆ ಪೊಲೀಸರ ಕ್ರಮ

■ **ವಿಕ ಸುದ್ದಿಲೋಕ** ಬೆಳಗಾವಿ

ಬೆಳಗಾವಿಗೆ ಶನಿವಾರ ಆಗಮಿಸಿದ್ದ ಸಾರಿಗೆ ನೌಕರರ ಹೋರಾಟ ಸಮಿತಿ ಗೌರವಾಧ್ಯಕ್ಷರೂ ಆಗಿರುವ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬೆಳಗಾವಿ ನಗರ ಪೊಲೀಸರು ಬಂಧಿಸಿ, ಜಿಲ್ಲೆಯಿಂದ ಹೊರಗೆ ಕಳುಹಿಸಿದ್ದಾರೆ.

ಶನಿವಾರ ಬೆಳಗ್ಗೆ ನಗರಕ್ಕೆ ಆಗಮಿಸಿದ ಕೋಡಿಹಳ್ಳಿ ಚಂದ್ರಶೇಖರ್ ಚನ್ನಮ್ಮ ವೃತ್ತ ಬಳಿಯ ಖಾಸಗಿ ಹೋಟೆಲ್‌ನಲ್ಲಿ ರೈತರು ಮತ್ತು ಸಾರಿಗೆ ನೌಕರರ ಸಂಘಟನೆ ಮುಖಂಡರೊಂದಿಗೆ ಸಭೆ ನಡೆಸುತ್ತಿದ್ದರು. ಅಲ್ಲದೆ, ನಂತರ ಸುವರ್ಣ ವಿಧಾನಸೌಧ ಬಳಿಯ ಗಾರ್ಡನ್‌ನಲ್ಲಿ ಸಾರಿಗೆ ನೌಕರರ ಹೋರಾಟದ ಮುಂದಿನ ರೂಪುರೇಷೆಗಳ ಕುರಿತು ಚರ್ಚಿಸಲು ಬಹಿರಂಗ ಸಭೆ ನಡೆಸಲು ಸಜ್ಜಾಗಿದ್ದರು.

ಆದರೆ, ಬಹಿರಂಗ ಸಭೆಗೆ ಅನುಮತಿ ಇಲ್ಲದ್ದರಿಂದ, ಈ ಕುರಿತು ಮಾಹಿತಿ ಪಡೆದ ಕ್ಯಾಂಪ್ ಠಾಣೆ ಪೊಲೀಸರು ಹೋಟೆಲ್‌ನಿಂದ ಹೊರಬಂದ ಕೋಡಿಹಳ್ಳಿ ಅವರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿ, ನಂತರ ಗಡೀಪಾರು ಮಾಡಿದರು.

ಅತ್ತ ಸುವರ್ಣ ಗಾರ್ಡನ್‌ನಲ್ಲಿ ಕರೆಯಲಾಗಿದ್ದ ಬಹಿರಂಗ ಸಭೆಗೆ ನಾನಾ ಭಾಗಗಳಿಂದ ಆಗಮಿಸುತ್ತಿದ್ದ ರೈತರು ಮತ್ತು ಸಾರಿಗೆ ನೌಕರರನ್ನೂ ಹಿರೇಬಾಗೇವಾಡಿ ಪೊಲೀಸರು ವಶಕ್ಕೆ ಪಡೆದರು. ಕೋವಿಡ್ ತುರ್ತು ಪರಿಸ್ಥಿತಿ ಮತ್ತು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅನುಮತಿ ಪಡೆಯದೆ ಸಭೆ ನಡೆಸಲು ಅವಕಾಶವಿಲ್ಲ ಎಂದು ಎಚ್ಚರಿಕೆ ನೀಡಿ ನಂತರ ಅವರನ್ನು ಬಿಡುಗಡೆಗೊಳಿಸಿದರು.

**ಪ್ರತಿಭಟನೆ:** ಕೋಡಿಹಳ್ಳಿ ಚಂದ್ರಶೇಖರ್ ಬಂಧನ ಖಂಡಿಸಿ ರೈತ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಹಠಾತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. "ಸಾರಿಗೆ ಹೋರಾಟ ಹತ್ತಿಕ್ಕಲು ಕೋಡಿಹಳ್ಳಿ ಅವರನ್ನು ಬಂಧಿಸಲಾಗಿದೆ. ತಕ್ಷಣ ಅವರನ್ನು ಬಿಡುಗಡೆಗೊಳಿಸಿ, ಸಾರಿಗೆ ನೌಕರರಿಗೆ ಆರನೇ ವೇತನ ಆಯೋಗ ಜಾರಿಗೊಳಿಸಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು", ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯದರ್ಶಿ ಭೀಮಶಿ ಗದಾಡಿ ಎಚ್ಚರಿಕೆ ನೀಡಿದರು.



ಬೆಳಗಾವಿಯಲ್ಲಿ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬಂಧಿಸಿ ವಾಹನದಲ್ಲಿ ಕರೆದೊಯ್ಯುತ್ತಿರುವ ಪೊಲೀಸರು.

### ಸಿಎಂಗೆ ವ್ಯವಧಾನವಿಲ್ಲ ಎಂದ ಚಂದ್ರಶೇಖರ್

ಬಂಧನಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಕೋಡಿಹಳ್ಳಿ ಚಂದ್ರಶೇಖರ್, 'ಸಾರಿಗೆ ನೌಕರರ ಹೋರಾಟ ದುರುದ್ದೇಶಪೂರಿತ' ಎಂಬ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿ, "ನಮಗೆ ಹೊಟ್ಟೆ ಹಸಿದಿದೆ. ನಮಗೆ ಅರೆ ಕೂಲಿ ಕೊಡುತ್ತಿದ್ದೀರಿ. ಅರ್ಧ ಜೀವನ ಮಾಡುತ್ತಿದ್ದೇವೆ. ನಮ್ಮ ಮಕ್ಕಳ ಶಾಲೆ, ಪಾಲಕರ ಆರೋಗ್ಯ ರಕ್ಷಣೆ ಸೇರಿದಂತೆ ಕುಟುಂಬ ನಿರ್ವಹಣೆಗೆ ಕಷ್ಟವಾಗುತ್ತಿದೆ ಎಂದು ಸಾರಿಗೆ ನೌಕರರು ಹೇಳಿಕೊಂಡರೆ ಅದು ದುರುದ್ದೇಶ ಹೇಗಾಗುತ್ತದೆ? ಅಧಿಕಾರಿಗಳು ಹೇಳುವ ಮಾತು ಮಾತ್ರ ಕೇಳುವ ಮುಖ್ಯಮಂತ್ರಿಗೆ ನೌಕರರು, ರೈತರ ಮಾತು ಕೇಳುವ ವ್ಯವಧಾನವಿಲ್ಲ", ಎಂದರು. ರಾಜ್ಯ ಸಾರಿಗೆ ನೌಕರರ ಸಂಘದ ಅಧ್ಯಕ್ಷ ಆರ್.ಚಂದ್ರಶೇಖರ್, ಸರಕಾರ ಸ್ಪಷ್ಟ ಭರವಸೆ ನೀಡುವವರೆಗೂ ಸಾರಿಗೆ ಬಸ್ ರಸ್ತೆಗಿಳಿಯುವುದಿಲ್ಲ ಎಂದರು.